◆ ನಮ್ಮಲ್ಲಿ ಹಳೆಯ ತಲೆಮಾರಿನ ವಿದ್ವಾಂಸರು ಹಳಗನ್ನಡ, ಸಂಪಾದನೆ, ಸಂಶೋಧನೆ ಜೊತೆಗೆ ಕನ್ನಡದ ಕೆಲಸಗಳನ್ನು ವ್ರತ ಎಂಬಂತೆ ಮಾಡುತ್ತಿದ್ದರು. ಈಗ ಅದೆಲ್ಲ ಕಡಿಮೆಯಾಗಿದೆ ಎಂದು ಅನ್ನಿಸುತ್ತಿಲ್ಲವೆ?

ನಿಜ, ಚರಿತ್ರೆಯ ಆವಶ್ಯಕತೆಗಳು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆಯಾಗಿರುತ್ತವೆ. ವಸಾಹತು ಕಾಲಘಟ್ಟದಲ್ಲಿ ಅನೇಕ ವಿದ್ವಾಂಸರು ಕನ್ನಡ ಸಾಹಿತ್ಯದ ಕುರಿತಾದ ಆರಂಭಿಕ ಕೆಲಸಗಳನ್ನು ಬಹಳ ನಿಷ್ಠೆಯಿಂದ ವ್ರತ ಎಂಬಂತೆ ಮಾಡಿದರು. ನಮ್ಮ ಸಂಶೋಧನೆಗಳಿಗೆ ಭದ್ರ ತಳಪಾಯವನ್ನು ನಿರ್ಮಿಸಿಕೊಟ್ಟವರೇ ಅವರು. ಈ ಆರಂಭಿಕ ಕೆಲಸಗಳನ್ನು 20ನೇ ಶತಮಾನದಲ್ಲಿ ಅರ್ಥಪೂರ್ಣವಾಗಿ ಮತ್ತು ವಿದ್ವತ್ ಪೂರ್ಣವಾಗಿ ದೇಶೀ ವಿದ್ವಾಂಸರು ಮುಂದುವರೆಸಿದರು. ಮಂಜೇಶ್ವರ ಗೋವಿಂದ ಪೈ, ರಾ. ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್, ಮೊದಲಾದವರ ಕೆಲಸಗಳು ಕನ್ನಡ ಸಂಶೋಧನೆಯ ಮಹತ್ವದ ಘಟ್ಟವೊಂದನ್ನು ಸೂಚಿಸುತ್ತದೆ. ಇವರಲ್ಲಿ ಪ್ರತಿಯೊಬ್ಬರೂ ಹೊಸ ಹಾದಿ ಹಿಡಿಯಲು ಪ್ರಯತ್ನ ಪಟ್ಟವರು. ಆ ಕಾಲದ ವಿದ್ವಾಂಸರ ಹಟ, ಕಠಿಣ ಶ್ರಮ, ವಿದ್ವತ್ತು ಮತ್ತು ಸಂಶೋಧನೆಯ ಮೇಲಣ ಬದ್ಧತೆಯನ್ನು ಇಂದು ನಮಗೆ ಊಹಿಸಿಕೊಳ್ಳುವುದೂ ಕಷ್ಟವಾಗುತ್ತಿದೆ. ಸಂಶೋಧನೆಯ ಪರಿಕರಗಳು ಏನೇನೂ ಇಲ್ಲದ ಕಾಲದಲ್ಲಿ ಇವರೆಲ್ಲ ಮಾಡಿದ ಕೆಲಸಗಳು ಅಸಾಮಾನ್ಯವಾದುವು. ಮುಂದೆ ಸ್ವಾತಂತ್ರ್ಯೋತ್ತರ ಭಾರತದ ಶೈಕ್ಷಣಿಕ ಅಗತ್ಯಗಳಿಗೆ ಅನುಗುಣವಾಗಿ ಕನ್ನಡ ಸಂಶೋಧನೆಯ ಅಗತ್ಯಗಳನ್ನು ಪುನಾರಚಿಸಿಕೊಂಡು, ಅದರ ಕ್ಷಿತಿಜಗಳನ್ನು ಅನೇಕರು ಗಮಾರ್ಹವಾಗಿ ವಿಸ್ತರಿಸಿದರು. ಇದೇ ಹೊತ್ತಿನಲ್ಲಿ ಜಾನಪದವೂ ತನ್ನ ಆರಂಭಿಕ ಸಂಗ್ರಹದ ಕೆಲಸಗಳನ್ನು ದಾಟಿಕೊಂಡು ಕನ್ನಡ ಸಂಶೋಧನೆಯ ಮುಖ್ಯ ವಿಷಯವಾಗಿ ಕಾಣಿಸಿಕೊಂಡಿತು.

ಆದರೆ ಈಗ ಸಂಶೋಧನಾ ಕ್ಷೇತ್ರ ಜಡವಾಗಿದೆ. ಬೆರಳೆಣಿಕೆಯ ಕೆಲವು ಹಿರಿಯರ ಕೆಲಸಗಳನ್ನು ಬಿಟ್ಟರೆ ಕನ್ನಡ ಸಂಶೋಧನೆಯು ಇಂದು ತನ್ನ ನೆಲೆಯನ್ನು ಕಳಕೊಂಡಿದೆ. ಹೊಸ ಹುಡುಗರಲ್ಲಿ ಸಂಶೋಧನಾ ಬದ್ಧತೆಯೇ ಕಾಣುತ್ತಿಲ್ಲ. ಎಲ್ಲವೂ ಸುಲಭದಲ್ಲಿಯೇ ನೆರವೇರಿಬಿಡಬೇಕು ಎಂಬ ಭಾವ ಬಲಿತಿದೆ.

◆ ಒಂದು ಸಮಾಜಕ್ಕೆ ಬೇಕಾದ ಬಹುಶ್ರುತ ವಿದ್ವಾಂಸರು ಈಗ ಕಾಣಿಸುತ್ತಿಲ್ಲ ಏಕೆ? ಅದಕ್ಕಿರಬಹುದಾದ ಕಾರಣಗಳು, ಸಂದರ್ಭಗಳು ಏನು?

ಈಗ ಪರಿಸ್ಥಿತಿ ತೀವ್ರವಾಗಿ ಬದಲಾಗಿದೆ. ಉದಾರೀಕರಣ, ಜಾಗತೀಕರಣ, ಖಾಸಗೀಕರಣ, ವ್ಯಾಪಾರೀಕರಣ ಹಾಗೂ ಮಾರುಕಟ್ಟೆಯ ನೀತಿಗಳು ಜಗತ್ತನ್ನು ಆಮೂಲಾಗ್ರವಾಗಿ ಬದಲಾಯಿಸಿವೆ. ಉನ್ನತ ಶಿಕ್ಷಣ ಕ್ಷೇತ್ರವೂ ಅದಕ್ಕನುಗುಣವಾಗಿ ಆಮೂಲಾಗ್ರವಾಗಿ ಬದಲಾಗುತ್ತಿದೆ. ಉನ್ನತ ಶಿಕ್ಷಣದ ಅಂತರರಾಷ್ಟ್ರೀಯಕರಣ ಇಂದಿನ ತೀವ್ರವಾದ ಪ್ರಕ್ರಿಯೆಗಳಲ್ಲಿ ಒಂದಾಗಿದೆ. ಜೊತೆಗೆ ಇಂದು ಶಿಕ್ಷಣವು ಒಂದು ರಾಜ್ಯದ, ಒಂದು ವಿಶ್ವವಿದ್ಯಾಲಯದ, ಅಥವಾ ಒಂದು ದೇಶದ ಗಡಿಗೆ ಸೀಮಿತವಾಗಿ ಉಳಿಯುತ್ತಿಲ್ಲ. ಇವುಗಳ ಪರಿಣಾಮವೋ ಎಂಬಂತೆ ನಿಂತ ನೆಲದ ಬಗ್ಗೆ ಗೌರವವಿಲ್ಲದ, ಮಣ್ಣಿನ ವಾಸನೆಯ ಅರಿವಿಲ್ಲದ ಅಂತರರಾಷ್ಟ್ರೀಯ ಪ್ರಜೆಗಳು ನಿರ್ಮಾಣವಾಗುತ್ತಿದ್ದಾರೆ. ಇಂಥಲ್ಲಿ ಸಹಜವಾಗಿಯೇ ಪ್ರಶ್ನಿಸುವುದನ್ನು ಕಲಿಸುವ, ಇತಿಹಾಸವನ್ನು ಶೋಧಿಸುವ, ರಾಜಕೀಯ ವಿನ್ಯಾಸಗಳನ್ನು ವಿಶ್ಲೇಷಿಸುವ, ಮಾನವೀಯ ಸಂಬಂಧಗಳನ್ನು ಪರಿಶೋಧಿಸುವ ಮಾನವಿಕಗಳಿಗೆ ಮಹತ್ವ ಕಡಿಮೆಯಾಗುತ್ತಿದೆ. ಈ ನಡುವೆ, ಇಂಥ ವಿಷಯಗಳ ಕುರಿತು ಮುಕ್ತಚಿಂತನೆಗೆ ಮತ್ತು ವಿಮರ್ಶೆಗೆ ಪೂರ್ಣ ಅವಕಾಶ ಕೊಡುವುದು ಪ್ರಜಾಪ್ರಭುತ್ವವಾದೀ ಸರಕಾರಗಳ ಅತಿ ದೊಡ್ಡ ಜವಾಬ್ದಾರಿ ಎಂಬುದನ್ನು ಸರಕಾರಗಳೇ ಮರೆತಿವೆ. ಜನರ ನೈತಿಕತೆಯನ್ನು